**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

**DTE-ADMI0ACM1/ 14 /2025 (E- 1746294 )**

ಆಯುಕ್ತರವರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಬೆಂಗಳೂರು-560 001,
ದಿನಾಂಕ:16-04-2025.

-:: **ಸುತ್ತೋಲೆ** ::-

**ವಿಷಯ**:- ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ 1924ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಶತಮಾನೋತ್ಸವದ ಅಂಗವಾಗಿ '**ಗಾಂಧಿ ಭಾರತ**' ಕಾರ್ಯಕ್ರಮವನ್ನು ಆಯೋಜಿಸುವ ಕುರಿತು.

**ಉಲ್ಲೇಖ**:-
1. ಸರ್ಕಾರದ ಆದೇಶ ಸಂ. ಕೆಸಿಐ/ಪಿಐಪಿ/264/2024, ದಿನಾಂಕ:01.10.2024.
2. ಸರ್ಕಾರದ ಆದೇಶ ಸಂಖ್ಯೆ:ಕೆಸಿಐ/ಪಿಐಪಿ/264/2024/(ಭಾ-2) ಬೆಂಗಳೂರು, ದಿನಾಂಕ: 16.12.2024.
3. ಈ ಕಛೇರಿ ಸುತ್ತೋಲೆ ಸಂ. ಡಿಟಿಇ/ಎನ್ಎಸ್ಎಸ್/01/ಐಡಿಪಿ/2023-24,ದಿನಾಂಕ:19-12-2024.
4. ಈ ಕಛೇರಿ ಸುತ್ತೋಲೆ ಸಂ. ಡಿಟಿಇ/ಎನ್ಎಸ್ಎಸ್/01/ಐಡಿಪಿ/2025-26/02,ದಿನಾಂಕ:09.04.2025.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸುತ್ತೋಲೆಯಲ್ಲಿ ಈಗಾಗಲೇ ತಿಳಿಸಿರುವಂತೆ, 1924ನೇ ಸಾಲಿನಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿ ಕಾಂಗ್ರೆಸ್ ಅಧಿವೇಶನವು ಈ ವರ್ಷ ಶತಮಾನದ ಮೈಲಿಗಲ್ಲನ್ನು ಪೂರ್ಣಗೊಳಿಸುತ್ತಿರುವ ಸಂದರ್ಭದಲ್ಲಿ "**ಗಾಂಧಿ ಭಾರತ**" ಎಂಬ ಹೆಸರಿನಲ್ಲಿ ಇಂದಿನ ಯುವಪೀಳಿಗೆಗೆ ಗಾಂಧೀಜಿಯವರ ಆದರ್ಶ, ವಿಚಾರಧಾರೆ ಮತ್ತು ಬೆಳಗಾವಿ ಅಧಿವೇಶನದಲ್ಲಿ ಪ್ರಸ್ತಾಪವಾದ ಸಂದೇಶಗಳನ್ನು ಪರಿಚಯಿಸಲು ಉಲ್ಲೇಖ (1) & (2)ರ ಸರ್ಕಾರದ ಆದೇಶಗಳಲ್ಲಿ ಸೂಚಿಸಿರುವ ಹಿನ್ನೆಲೆಯಲ್ಲಿ ಉಲ್ಲೇಖ (3)ರ ಈ ಕಛೇರಿಯ ಸುತ್ತೋಲೆಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಸರ್ಕಾರಿ, ಅನುದಾನಿತ ಮತ್ತು ಖಾಸಗಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲು ಸಂಬಂಧಪಟ್ಟ ಪ್ರಾಂಶುಪಾಲರಿಗೆ ಸೂಚಿಸಲಾಗಿರುತ್ತದೆ.

- ***ದಿ: 02.10.2025 ರವರೆಗೆ ನಿರಂತರವಾಗಿ ಎಲ್ಲಾ ಕಾಲೇಜುಗಳಲ್ಲಿ ನೈತಿಕ ಶಿಕ್ಷಣ ಬೋಧಿಸುವ "ನಾವು ಮನುಜರು" ಶೀರ್ಷಿಕೆಯಡಿ ಅತಿಥಿ ಉಪನ್ಯಾಸಗಳು, ಕಾರ್ಯಾಗಾರ, ಜಾಗೃತಿ ಅಭಿಯಾನ ಇವೇ ಮೊದಲಾದ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಮಹಾತ್ಮ ಗಾಂಧೀಜಿಯವರ ವಿಚಾರಧಾರೆಗಳಾದ ಸತ್ಯ ಅಹಿಂಸೆ, ಸಹಬಾಳ್ವೆ, ಅಸ್ಪೃಶ್ಯತೆ ನಿವಾರಣೆ, ಆರ್ಥಿಕ ಚಿಂತನೆಗಳು, ಗ್ರಾಮ ಸ್ವರಾಜ್, ಖಾದಿ ಹಾಗೂ ದೇಶಭಕ್ತಿ ಮುಂತಾದ ವಿಷಯಗಳ ಕುರಿತು ಕಾಲೇಜುಗಳಲ್ಲಿ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು.***

- **ಈ ನಿಟ್ಟಿನಲ್ಲಿ ಪ್ರಬಂಧ, ಭಾಷಣ, ರಸಪ್ರಶ್ನೆ, ನಾಟಕ, ಏಕಪಾತ್ರಾಭಿನಯ, ದೇಶಭಕ್ತಿ ಗೀತೆಗಳು ಇವೇ ಮೊದಲಾದ ಸ್ಪರ್ಧೆಗಳನ್ನು ಏರ್ಪಡಿಸುವುದು. ಈ ಸ್ಪರ್ಧೆಗಳ ಕುರಿತ ವರದಿಯನ್ನು ದಿ:10-05-2025ರೊಳಗೆ ಸಂಬಂಧಪಟ್ಟ ಸಹಾಯಕ ನಿರ್ದೇಶಕರು(ಎಂಪಿಸಿ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಈ ಕಛೇರಿಗೆ ಕಳುಹಿಸುವುದು.**

1. **ಗಾಂಧಿ ಭಾರತ ಲಾಂಛನ.**
2. **ಮಹಾತ್ಮಾ ಗಾಂಧಿಯವರ ಧ್ಯಾನಸ್ಥ ಸ್ಥಿತಿಯ ಭಾವಚಿತ್ರ**
3. **ಮಹಾತ್ಮಾ ಗಾಂಧಿಯವರು ಬೋಧಿಸಿದ ಸಪ್ತ ಸಾಮಾಜಿಕ ಪಾತಕಗಳ ಫಲಕ.**

**ಮೇಲ್ಕಂಡ ಮೂರು ಚಿತ್ರಗಳನ್ನು ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಇಂಜಿನಿಯರಿಂಗ್, ಪಾಲಿಟೆಕ್ನಿಕ್ ಹಾಗೂ ಕಿರಿಯ ತಾಂತ್ರಿಕ ಶಾಲೆಗಳ ಪ್ರಮುಖ ತಾಣದಲ್ಲಿ (2"X3" Feet)ಹಳತೆಯ ಚಿತ್ರಗಳನ್ನು ಕಾಲೇಜುಗಳ ಮುಖ್ಯ ತಾಣದಲ್ಲಿ ಕಡ್ಡಾಯವಾಗಿ ಪ್ರದರ್ಶಿಸುವುದು.**

- **ಪ್ರತಿ ದಿನ ಪ್ರಾರ್ಥನೆ/ಅಸೆಂಬ್ಲಿಯಲ್ಲಿ ವಿದ್ಯಾರ್ಥಿಗಳಿಂದ ಸಪ್ತ ಸಾಮಾಜಿಕ ಪಾತಕಗಳನ್ನು ಸಾಮೂಹಿಕವಾಗಿ ವಾಚನ ಮಾಡಿಸುವುದು ((1) ಗಾಂಧಿ ಭಾರತ ಲಾಂಛನ (2) ಮಹಾತ್ಮಾ ಗಾಂಧಿಯವರ ಧ್ಯಾನಸ್ಥ ಸ್ಥಿತಿಯ ಭಾವಚಿತ್ರ (3) ಮಹಾತ್ಮಾ ಗಾಂಧಿಯವರು ಬೋಧಿಸಿದ ಸಪ್ತ ಸಾಮಾಜಿಕ ಪಾತಕಗಳ ಫಲಕ )** ಭಾವಚಿತ್ರಗಳಿಗೆ ರೂ.3,000/- ವೆಚ್ಚದ ಮಿತಿಯೊಳಗೆ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಇಂಜಿನಿಯರಿಂಗ್, ಪಾಲಿಟೆಕ್ನಿಕ್ ಹಾಗೂ ಕಿರಿಯ ತಾಂತ್ರಿಕ ಶಾಲೆಗಳ ತಮ್ಮಲ್ಲಿ ಲಭ್ಯವಿರುವ **IDP ಯಲ್ಲಿ** ಹಣದಲ್ಲಿ ಭರಿಸುವುದು. ಖಾಸಗಿ ಕಾಲೇಜುಗಳು ತಮ್ಮಲ್ಲಿ ಲಭ್ಯವಿರುವ ಅನುದಾನದಲ್ಲಿ ಭರಿಸುವುದು.

ಪ್ರಾಂಶುಪಾಲರುಗಳು, ಮೂರು ಭಾವ ಚಿತ್ರಗಳೊಂದಿಗೆ ಹಾಗೂ ವರದಿಯನ್ನು ಪ್ರತ್ಯೇಕವಾಗಿ ಕ್ರೋಢೀಕರಿಸಿ, **ಆಯುಕ್ತಾಲಯದ ಇ-ಮೇಲ್**: **gandhibharatacm@gmail.com ಮೂಲಕ ದಿ: 10-05-2025ರ ಒಳಗೆ ತಪ್ಪದೆ ಸಲ್ಲಿಸುವುದು.**

Digitally signed by
MANJUSHREE N
Date: 25-04-2025
16:03:51

**ಆಯುಕ್ತರು**
**ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ**
**ಬೆಂಗಳೂರು**

**ಇವರಿಗೆ**:

1. ***ರಾಜ್ಯದ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಖಾಸಗಿ ಅನುದಾನರಹಿತ ಇಂಜಿನಿಯರಿಂಗ್, ಪಾಲಿಟೆಕ್ನಿಕ್ ಕಾಲೇಜುಗಳ ಹಾಗೂ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರುಗಳಿಗೆ***-ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ.
2. ಸಂಯೋಜನಾಧಿಕಾರಿಗಳು, ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ - ಸದರಿ ಆದೇಶವನ್ನು ಇಲಾಖಾ ವೆಬ್-ಸೈಟ್ ನಲ್ಲಿ ಪ್ರಕಟಿಸುವ ಸಂಬಂಧ ಅಗತ್ಯ ಕ್ರಮಕ್ಕಾಗಿ.
3. ಆಯುಕ್ತರ ಆಪ್ತಶಾಖೆಗೆ/ನಿರ್ದೇಶಕರ ಆಪ್ತಶಾಖೆಗೆ.
4. ಎನ್ಎಸ್ಎಸ್ ವಿಭಾಗಕ್ಕೆ.
5. ಕಛೇರಿ ಪ್ರತಿ.